

ಆದರೂ, ಅಪಾರ್ಟ್‌ಮೆಂಟಿನಿಂದ ಹೊರಹೋಗುವುದು ಮತ್ತು ಅಪಾರ್ಟ್‌ಮೆಂಟಿನ ಒಳಗೆ ಬರುವುದು ಕೊಂಚ ಕ್ಲಿಷ್ಟಕರವಾದ್ದರಿಂದ ಅದನ್ನೇ ಗಣನೆಗೆ ತೆಗೆದುಕೊಳ್ಳೋಣ.

ವಸ್ತುಗಳ ಸಾಗಣೆಯ ಸಂದರ್ಭದಲ್ಲಿ ಅಪಾರ್ಟ್‌ಮೆಂಟ್‌ಗಳು ಒಳಬರುವ ಅಥವಾ ಹೊರಹೋಗುವ ವಾಸಿಗಳಿಂದ ಒಂದು ನಿರ್ದಿಷ್ಟ ಶುಲ್ಕವನ್ನು ವಸೂಲಿ ಮಾಡುತ್ತವೆ. ನೀವು ಒಂದು ಅಪಾರ್ಟ್‌ಮೆಂಟಿನಿಂದ ಇನ್ನೊಂದಕ್ಕೆ ಹೋಗುತ್ತಿದ್ದರೆ, ಎರಡೂ ಕಡೆಗಳಲ್ಲಿ ಶುಲ್ಕವನ್ನು ಪಾವತಿಸಬೇಕಾಗುತ್ತದೆ! ವರ್ಗಾವಣೆಯ ದಿನಕ್ಕಿಂತ ಮುಂಚೆಯೇ ಇದನ್ನು ಪಾವತಿಸಿ, ರಶೀದಿಯನ್ನು ಇಟ್ಟುಕೊಳ್ಳುವುದು ವಾಸಿ. ಗೇಟಿನಿಂದ ಆಚೆ ಹೋಗುವ ಹಾಗೂ ಒಳಬರುವ ಮುಂಚೆ ಈ ರಶೀದಿಯನ್ನು ತೋರಿಸಿಬಿಟ್ಟರೆ ಅವರಿಗೂ ಸಮಾಧಾನ, ನಿಮಗೂ ಸುಲಭ.

ದೊಡ್ಡ ಸಮಸ್ಯೆ ಅಂದರೆ, ವೇಳೆಯ ನಿರ್ಬಂಧ. ಬಹುತೇಕ ಅಪಾರ್ಟ್‌ಮೆಂಟ್‌ಗಳಲ್ಲಿ ಮುಂಜಾನೆ 9ರಿಂದ ಸಂಜೆ 6ರ ವರೆಗೆ ಮಾತ್ರ ವಸ್ತುಗಳ ಸಾಗಣೆಗೆ ಅವಕಾಶವಿರುತ್ತದೆ. ಮನೆ ವಸ್ತುಗಳನ್ನು ಪ್ಯಾಕಿಂಗ್ ಮಾಡುವ, ಕಟ್ಟುವ, ಗಾಡಿಯಲ್ಲಿ ಹೇರುವ, ದಾರಿ ಕ್ರಮಿಸುವ, ಗಾಡಿಯಿಂದ ಇಳಿಸುವ ಹಾಗೂ ಜೋಡಿಸುವ ಸಂಪೂರ್ಣ ಕ್ರಿಯೆ ಇಷ್ಟು ವೇಳೆಯಲ್ಲಿ ಮುಗಿಯಬೇಕು. ಇನ್ನೊಂದು ಗಮನಿಸಬೇಕಾದ ಅಂಶವೆಂದರೆ, ಮನೆ ವಸ್ತು ಸಾಗಣೆಗೆ ಕೇವಲ ಸರ್ವೀಸ್ ಲಿಫ್ಟ್‌ಅನ್ನು ಮಾತ್ರ ಬಳಸಬೇಕು ಎನ್ನುವುದು. ಈ ತರಹದ ನಿರ್ಬಂಧಗಳೆಲ್ಲವೂ ಅಲ್ಲಿನ ಇತರ ನಿವಾಸಿಗಳಿಗೆ ತೊಂದರೆ ಆಗಬಾರದು ಎನ್ನುವ ಕಾರಣಕ್ಕಾಗಿ ಇರುವುದರಿಂದ, ನೀವು ಅದನ್ನು ಪಾಲಿಸುವುದು ನ್ಯಾಯವೇ ಸರಿ. ಏಕೆಂದರೆ ಈಗ ನೀವೂ ಅಲ್ಲಿನ ನಿವಾಸಿಗಳು ಆಗುವವರಿದ್ದೀರಿ.

ವರ್ಗಾವಣೆ ಕಾರ್ಯವನ್ನು ನೀವೇ ಸ್ವತಃ ನಿಭಾಯಿಸುತ್ತೀರಾ ಅಥವಾ ಇದರಲ್ಲಿ ಪರಿಣತಿ ಹೊಂದಿದ ಸಂಸ್ಥೆಯ ಸೇವೆಯನ್ನು ಪಡೆಯುವಿರಾ ಎಂಬುದನ್ನು ನಿರ್ಧರಿಸಿಕೊಳ್ಳಿ. ನೀವೇ ಸ್ವತಃ ಸಾಗಿಸಿದರೆ ಸಾಕಷ್ಟು ದುಡ್ಡು ಮಿಗಿಸಬಹುದು. ಆದರೆ ನಿಮ್ಮ ಸಹಾಯಕ್ಕೆ ಸಾಕಷ್ಟು ಕೈಗಳು ಇರಬೇಕು. ಪ್ಯಾಕಿಂಗ್ ಇತ್ಯಾದಿಗಳಿಗೆ ಅಗತ್ಯ ವಸ್ತುಗಳು ಇರಬೇಕು. ಸಾಗಣೆಯ ನಂತರ ಈ ವಸ್ತುಗಳು ಕಸವಾಗುತ್ತವೆ, ಅವುಗಳನ್ನು ವಿಲೇ ಮಾಡಬೇಕು. ಸ್ವಲ್ಪ ದುಡ್ಡು ಖರ್ಚಾದರೂ ಅಡ್ಡಿಯಿಲ್ಲ ಎಂದು ನೀವು, ಸಾಮಾನ್ಯವಾಗಿ 'ಪ್ಯಾಕರ್ಸ್ ಅಂಡ್ ಮೂವರ್ಸ್' ಎಂದು ಕರೆಯಲಾಗುವ ಸಂಸ್ಥೆಗಳ ಸೇವೆಯನ್ನು ಪಡೆಯಬಹುದು. ಅವರಿಗೆ ಇದೇ ಕೆಲಸವಾದ್ದರಿಂದ ಅದರಲ್ಲಿ ಪರಿಣತಿ ಇರುತ್ತದೆ. ಕೆಲಸಗಾರರು, ವಾಹನ ಇತ್ಯಾದಿ ಇರುತ್ತವೆ.

ಆದರೆ, ಸಾಗಣೆಕಾರರನ್ನು ಕರೆಯುವುದೇ ಆದಲ್ಲಿ ಸ್ವಲ್ಪ ಹುಡುಕಾಡಿ ಒಳ್ಳೆಯ ಹೆಸರು ಇರುವ, ವಿಶ್ವಾಸಾರ್ಹ ಸಂಸ್ಥೆಯವರನ್ನೇ ಗುರುತಿಸಿ. ಇಂಥವರ ಸೇವೆಯನ್ನು ಬಳಸಿಕೊಳ್ಳುವಾಗಲೂ ನಾವು ಕೆಲವೊಂದು ಮುಂದಾಲೋಚನೆ, ಪೂರ್ವ ತಯಾರಿ ನಡೆಸಬೇಕಾಗುತ್ತದೆ. ಇದಕ್ಕೆ ಸಂಬಂಧಿಸಿದ ಕಾರ್ಯ-ಕ್ರಮದ ಪಟ್ಟಿಯನ್ನು ಹಲವು ಘಟ್ಟಗಳಾಗಿ ವಿಂಗಡಿಸಿದ್ದೇನೆ; ಇದನ್ನು ತಾಳೆಪಟ್ಟಿಯಂತೆ ಕೂಡ ಬಳಸಿಕೊಳ್ಳಬಹುದು.

## ಯೋಜನಾಪೂರ್ವ ತಯಾರಿ:

ನಿಮ್ಮ ಹೊಸ ಮನೆಯಲ್ಲಿ ಎಲ್ಲಾ ತರಹದ ನೀರಿನ ನಲ್ಲಿಗಳು, ಸಿಂಕ್‌ಗಳು, ಚಿಲಕಗಳು ಇತ್ಯಾದಿ ಕೆಲಸ ಮಾಡುತ್ತಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಿ.

ಇದೇ ತರಹ, ಎಲೆಕ್ಟ್ರಿಕ್ ಪಾಯಿಂಟ್‌ಗಳು, ದೀಪಗಳು, ಫ್ಯಾನ್‌ಗಳು ಕೆಲಸ ಮಾಡುತ್ತಿವೆಯೇ ಎಂದು ಖಚಿತ ಪಡಿಸಿಕೊಳ್ಳಿ. ಹೊಸ ಮನೆಗೆ ಹೋದ ಮೇಲೆ ಶಾಕ್ ಹೊಡೆಸಿಕೊಳ್ಳುವುದು ಬೇಡ.

ಮನೆಗೆ ಪೇಂಟಿಂಗ್ ಆಗಿದೆಯೇ ಗಮನಿಸಿ. ಹೇಗೂ ಹೊಸ ಮನೆಗೆ ಹೋಗುತ್ತಿದ್ದೀರಿ, ಕೊಳಕಾದ ಗೋಡೆಯ ದರ್ಶನವೇಕೆ, ಸೂರಿನ ಸಹವಾಸವೇಕೆ? ಮೇಲಿನವು ಆಗಿರದಿದ್ದರೆ ಸೂಕ್ತವಾದ ವ್ಯಕ್ತಿ/ಸಂಸ್ಥೆಗಳನ್ನು ಸಂಪರ್ಕಿಸಿ ಅವುಗಳನ್ನು ಪೂರ್ತಿಗೊಳಿಸಿ ನಿಮ್ಮ ಗೃಹಪ್ರವೇಶಕ್ಕೆ ಹೊಸ ಮನೆಯನ್ನು ಸಜ್ಜುಗೊಳಿಸಿಕೊಳ್ಳಿ.

ನೀವು ಬಿಡುತ್ತಿರುವ/ಹೋಗುತ್ತಿರುವ ಅಪಾರ್ಟ್‌ಮೆಂಟಿನಲ್ಲಿ ವೇಳಾ ನಿರ್ಬಂಧವೇನಾದರೂ ಇದೆಯೇ ಎಂದು ತಿಳಿದುಕೊಳ್ಳಿ, ಅದಕ್ಕೆ ತಕ್ಕ ಹಾಗೆ ಯೋಜಿಸಿಕೊಳ್ಳಿ. ಶುಲ್ಕವೇನಾದರೂ ಇದ್ದರೆ ಮೊದಲೇ ಪಾವತಿಸಿ ರಶೀದಿ